1. ಒಪ್ಪಿಗೆ ಐತೀರ್ಪು ದರಗಳಿಗೆ ಸರ್ಕಾರವು ದರ ನಿಗಧಿ ಮಾಡುವಲ್ಲಿ ಸಲಹಾ ಸಮಿತಿ ನೇಮಿಸಿದ್ದು, ಸಮಿತಿಯ ಶಿಫಾರಸ್ಸು ಪ್ರಕಾರ ಸರ್ಕಾರವು ದರಗಳನ್ನು ನಿಗಧಿಪಡಿಸಿರುವುದರಿಂದ ಇದರ ಬಗ್ಗೆ ಯಾವುದೇ ಕ್ರಮದ ಅವಶ್ಯಕತೆ ಇರುವುದಿಲ್ಲ.

2. ಸಲಹಾ ಸಮಿತಿಯ ನಿರ್ಣಯದಂತೆ ಬೆಲೆ ನಿಗಧಿಪಡಿಸುವುದರಿಂದ, ಈ ಹಂತದಲ್ಲಿ ಪರಿಷ್ಕರಿಸುವ ಅವಶ್ಯಕತೆ ಇರುವುದಿಲ್ಲ.

ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟಿ ಇತ್ಯಾದಿಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡುವ ಬಗ್ಗೆ

1200(1820) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟೆ, ಚಡಚಣ, ಕಲಕೇರಿ, ಬಬಲೇಶ್ವರ, ದೇವರಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ತಾಲ್ಲೂಕು ರಚನೆ ಮಾಡದೇ ಇದ್ದಲ್ಲಿ, ಸದರಿ ನಾಡ ಕಛೇರಿಗಳಿಗೆ ವಿಶೇಷ ತಹಸೀಲ್ದಾರ್‌ರುಗಳನ್ನು ನೇಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

ಅ) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವಶ್ಯಕತೆ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲಿಸಿರುತ್ತವೆ. ಹೊಸ ತಾಲ್ಲೂಕುಗಳನ್ನು ಸೃಜಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಆದರೆ ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸುವ ದೃಷ್ಟಿಯಿಂದ ಬಿಜಾಪುರ ಜಿಲ್ಲೆಯ ನಿಡಗುಂದಿ, ತಾಳಿಕೋಟೆ, ಬಬಲೇಶ್ವರಗಳಿಗೆ ಒಂದೊಂದು ವಿಶೇಷ ತಹಸೀಲ್ದಾರರನ್ನು ನೇಮಿಸಲಾಗಿದೆ. ಅಲ್ಲದೆ, ಜಡಚಣಕ್ಕೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕೊಲಹಾರ, ಕಲಕೇರಿಹಾಗೂ ದೇವರ ಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಸೃಜಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ನಾಡಕಛೇರಿಗಳಿಗೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಬಿಜಾಪುರ ಜಿಲ್ಲೆಗೆ ಬರಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾದ ಹಣ ಮತ್ತು ಆಹಾರ ಧಾನ್ಯಗಳು

1201(1821) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಹಣ ಮತ್ತು ಆಹಾರಧಾನ್ಯಗಳು ಎಷ್ಟು?

ಆ) ಇದರಲ್ಲಿ ರಾಜ್ಯ ಸರ್ಕಾರ ಎಷ್ಟು ಎತ್ತುವಳಿ ಮಾಡಿದೆ?

ಇ) ಎಷ್ಟು ಬಿಡುಗಡೆ ಮಾಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು).

ಈ) ಬರ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ ಮತ್ತು ಆಹಾರಧಾನ್ಯ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು).

ಉ) ಬಿಜಾಪುರ ಜಿಲ್ಲೆಯಲ್ಲಿ ಬರ ಪರಿಹಾರಕ್ಕೆ ವೆಚ್ಚ ಮಾಡಿರುವ ಹಣ ಮತ್ತು ಆಹಾರಧಾನ್ಯ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಕಂದಾಯ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಹಣ ರೂ. 139.18 ಕೋಟಿ ಮತ್ತು ಆಹಾರಧಾನ್ಯ ಒಟ್ಟು 3.65 ಲಕ್ಷ ಡನ್ ಅಕ್ಕಿಯನ್ನು ಬಿಡುಗಡೆ ಮಾಡಲಾಗಿದೆ.

ಆ) ರಾಜ್ಯ ಸರ್ಕಾರ 3.64 ಲಕ್ಷ ಟನ್ ಆಹಾರಧಾನ್ಯಗಳನ್ನು ಎತ್ತುವಳಿ ಮಾಡಿದೆ.

ಇ) ಮಾಹಿತಿ ಅನುಬಂಧದಲ್ಲಿ ಒದಗಿಸಲಾಗಿದೆ.

ಈ) ಇದುವರೆಗೆ ರೂ. 206.86 ಕೋಟಿ ಹಣವನ್ನು ಮತ್ತು 3.65 ಲಕ್ಷ ಮೆ.ಟನ್ ಅಕ್ಕಿ ಬಿಡುಗಡೆ ಮಾಡಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬುಧ-1ರಲ್ಲಿ ತಿಳಿಸಲಾಗಿದೆ.

ಉ) ಬಿಜಾಪುರ ಜಿಲ್ಲೆಯಲ್ಲಿ ಫೆಬ್ರವರಿ ಅಂತ್ಯದವರೆಗೆ ಒಟ್ಟು ರೂ. 423.73 ಲಕ್ಷ ಹಣ ವೆಚ್ಚ ಮಾಡಲಾಗಿದೆ ಹಾಗೂ ದಿನಾಂಕ: 10.3.2003 ರವರೆಗೆ 8795 ಮೆ.ಟನ್ ಆಹಾರಧಾನ್ಯ ಬಳಸಲಾಗಿದೆ. ತಾಲ್ಲೂಕುವಾರು ಅನುದಾನ ಹಾಗೂ ಆಹಾರಧಾನ್ಯವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿಲ್ಲ.

Annexure-1

Details regarding release of funds & foodgrains for drought related works during 2002-2003

Sl. No.	Districts	Funds released (Rs.in.lakhs)	Foodgrains released in M.Ts.
1	2	3	4
1.	Bangalore (Urban)	481.5000	2100.00
2.	Bangalore (Rural)	759.1250	15750.00
3.	Kolar	1025.6250	21700.00
4.	Tumkur	859.1045	23801.00
5.	Chitradurga	685.0000	15500.00
6.	Davanagere	796.0000	23000.00
7.	Shimoga	892.7000	17300.00
8.	Mysore	719.5000	13400.00
9.	Chamarajanagar	439.7500	10850.00
10.	Mandya	689.9955	13999.00

1	2	3	4
11.	Chikmagalur	631.5000	9860.00
12.	Hassan	729.0000	25750.00
13.	Kodagu	124.0000	-
14.	Dakshina Kannada	289.0000	-
15.	Udupi	195.0000	-
16.	Gulbarga	1239.0000	28750.00
17.	Bidar	480.5000	7750.00
18.	Raichur	579.5000	15500.00
19.	Koppal	490.5000	17500.00
20.	Bellary	800.0000	24350.00
21.	Belgaum	1362.3000	17900.00
22.	Bijapur	649.0000	10400.00
23.	Bagalkote		9400.00
24.	Dharwar	755.2500	8900.00
25.	Gadag	635.1000	13300.00
26.	Haveri	848.000	13000.00
27.	Uttara Kannada	706.2500	5250.00
28.	C.E. R.D.E.D	255.0000	0.00
29.	B.M.P.	50.0000	0.00
30.	Agriculture	1000.0000	0.00
31.	Animal Husbandry	975.0000	0.00
	Total	**20686.0000**	**366000**

ಚಿತ್ರದುರ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಭೂಮಿ

1204(1440) ಶ್ರೀ ಚಂದ್ರಪ್ಪ ಎಂ.(ಭರಮಸಾಗರ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಭೂಮಿ ಎಷ್ಟು; ಇದರಲ್ಲಿ ಕಂದಾಯ ಇಲಾಖೆಯಿಂದ ಸಿ ಮತ್ತು ಡಿ ನೋಟಿಫಿಕೇಷನ್ ಆಗಿ ಅರಣ್ಯ ಇಲಾಖೆಗೆ ಸೇರಿರುವ ಹಾಗೂ ನೋಟಿಫಿಕೇಷನ್ ಆಗದೆ ಅರಣ್ಯ ಇಲಾಖೆ ವಶದಲ್ಲಿರುವ ಭೂಮಿ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು).

ಆ) ಸಿ ಮತ್ತು ಡಿ ವರ್ಗದ ಭೂಮಿ ಅರಣ್ಯ ಇಲಾಖೆ ವಶದಲ್ಲಿದ್ದರೆ, ಎಷ್ಟು ಲಕ್ಷ ಗಿಡಮರಗಳನ್ನು ಬೆಳೆಸಲಾಗಿದೆ ಹಾಗೂ ಅರಣ್ಯ ಇಲಾಖೆಗೆ ಸೇರಿದ ಭೂಮಿಯಲ್ಲಿ ಎಷ್ಟು ಎಕರೆ ಪ್ರದೇಶಗಳಲ್ಲಿ ಅರಣ್ಯ ಬೆಳೆಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಇ) 2000-01ರಿಂದ ಇಲ್ಲಿಯವರೆಗೆ ಕಾಡನ್ನು ಬೆಳೆಸಲು ಹಾಗೂ ವಿವಿಧ ಕಾಮಗಾರಿಗಳಿಗೆ ಖರ್ಚುಮಾಡಿದ ಹಣವೆಷ್ಟು ಮತ್ತು ಕಾಮಗಾರಿಗಳನ್ನು ಕೈಗೊಂಡಿರುವ ವಿವರ ನೀಡುವುದು;